ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಮಸ್ತಕಕ್ಕಳಿವುಂಟು ಪುಸ್ತಕಕ್ಕಳಿವುಂಟೆ?

ಅನೇಕ ಪುಸ್ತಕಗಳ ಸಂಗ್ರಹವಿರುವ ಒಂದು ಯುಎಸ್‌ಬಿ ಕಡ್ಡಿ, ಅಥವಾ ಕಿಂಡಲ್‌ನಂತಹ ಪರಿಕರವನ್ನು ಕದ್ದರೆ ಅಲ್ಲಿ ಸಿಗುವುದು ಪುಸ್ತಕಗಳ ಸಂಗ್ರಹ. ಆ ಸಂಗ್ರಹವನ್ನು ಅಳಿಸಿ ಅದನ್ನೊಂದು ಎಲೆಕ್ಟ್ರಾನಿಕ್ ಪರಿಕರವನ್ನಾಗಿ ಉಪಯೋಗಿಸಬಹುದು. ಅದರ ಸಂಗ್ರಹದಲ್ಲಿ ಬೇರೆ ಕಂಟೆಂಟ್ ಸೇರಿಸಬಹುದು. ಆದರೆ, ಒಂದು ಪುಸ್ತಕವನ್ನು ಕೈಯಲ್ಲಿ ಹಿಡಿದರೆ ಅದು ತನ್ನದೇ ಒಂದು ಭಿನ್ನ ವ್ಯಕ್ತಿತ್ವವನ್ನು ಸಂಕೇತಿಸುತ್ತದೆ.

ಹಲವು ವರ್ಷಗಳ ಹಿಂದೆ ದುಬಾಯಿಯ ಒಂದು ವಿದ್ಯಾಸಂಸ್ಥೆಯಲ್ಲಿ ಒಂದು ವಾರ ಕಾಲ ಕಲಿಸಲು ಹೋಗಿದ್ದೆ. ಅಲ್ಲಿ ಸಮಯ ಕಳೆಯಲು 'ನಿಮ್ಮ ಗ್ರಂಥಾಲಯ ನೋಡಬೇಕು?' ಅಂದೆ. ಸಂಸ್ಥೆಯವರು ನನ್ನನ್ನು ಒಂದು ಮಧ್ಯಮ ಗಾತ್ರದ ಕೋಣೆಗೆ ಕರೆದೊಯ್ದು ಅಲ್ಲಿದ್ದ ಹತ್ತು ಕಂಪ್ಯೂಟರ್ ಟರ್ಮಿನಲ್‌ಗಳನ್ನು ತೋರಿಸಿ – 'ಇದೇ ನಮ್ಮ ಗ್ರಂಥಾಲಯ' ಎಂದರು. 'ಇಲ್ಲಿ ಎಲ್ಲ ಪುಸ್ತಕಗಳ ಪಿ.ಡಿ.ಎಫ್.ಗಳಿವೆ, ನಿಮಗೆ ಬೇಕಾದ ಜರ್ನಲ್‌ಗಳೂ ಇವೆ. ಏನು ಬೇಕಿದ್ದರೂ ಕೀವರ್ಡ್ ಹಾಕಿ ಹುಡುಕಿದರೆ ತೆರೆಯ ಮೇಲೆ ಪ್ರಕಟವಾಗುತ್ತದೆ' ಎಂದರು. ಅವರು ಹೇಳಿದ್ದು ಸರಿಯಿತ್ತು. ಒಂದು ಕಪಾಟಿನಲ್ಲಿ ಹಿಡಿಸುವುದಕ್ಕಿಂತ ಹೆಚ್ಚಿನ ಪುಸ್ತಕಗಳು ಆ ವ್ಯವಸ್ಥೆಯಲ್ಲಿದ್ದುವು. ಆದರೆ, ಇಂಥದೇ ಪುಸ್ತಕವನ್ನು ನೋಡಬೇಕೆಂದು ಮನಸ್ಸು ಮಾಡಿರದ ನನ್ನ ತಕ್ಷಣದ ತುರ್ತಿಗೆ ಅದು ಸಮರ್ಪಕವಾಗಿರಲಿಲ್ಲ. ಲೈಬ್ರರಿಯಲ್ಲಿ ಅಡ್ಡಾಡಿದರೆ ಯಾವುದಾದರೂ ಆಸಕ್ತಿಕರ ಮುಖಪುಟ, ಹಿಂದೆ ಯಾರೋ ಹೇಳಿದ್ದ, ಎಲ್ಲೋ ಕೇಳಿದ್ದ ಲೇಖಕನ ಪುಸ್ತಕ, ಕಿರುಪುಸ್ತಕ, ದಪ್ಪ ಪುಸ್ತಕ, ಸುಂದರ ಪುಸ್ತಕ – ಹೀಗೆ ಅನೇಕ ಪೂರ್ವನಿಯೋಜಿತವಲ್ಲದ ಕಾರಣಗಳಿಂದ ಒಂದು ಪುಸ್ತಕವನ್ನ ಕೈಗೆತ್ತಿಕೊಳ್ಳುವ ಸಾಧ್ಯತೆಯನ್ನು ಆ ತೆರೆ ನೀಡಲಿಲ್ಲ. ತೆರೆಯನ್ನು ಪುಸ್ತಕಗಳ ಹುಡುಕಾಟಕ್ಕಾಗಿ ಉಪಯೋಗಿಸಿದ್ದೆ; ತೆರೆಯ ಮೇಲೆ ಅನೇಕ ಪೇಪರುಗಳನ್ನೂ ಓದಿದ್ದೆ. ಹೀಗಾಗಿ ತೆರೆಯಮೇಲೆ ಕಾಣುವ ಸಾಹಿತ್ಯದ ಬಗ್ಗೆ ನನಗೆ ಮುಜುಗರ ಇರಲಿಲ್ಲ. ಆದರೂ ಆ ಕ್ಷಣದ ಅವಶ್ಯಕತೆಗೆ ನನಗೆ ಬೇಕಿದ್ದದ್ದು ಒಂದು ಸಾಂಪ್ರದಾಯಿಕ ಗ್ರಂಥಾಲಯ, ಅಲ್ಲಿ ಆವಿಷ್ಕರಿಸುವ ಪುಸ್ತಕಗಳು, ಮತ್ತು ಅದರಿಂದ ನಿರ್ವಾಣ. ಯಾವುದೂ ಆ ತೆರೆಯ ಮೇಲೆ ಸಾಧ್ಯವಿರಲಿಲ್ಲ.

ತಂತ್ರಜ್ಞಾನದಿಂದಾಗಿ ನಮ್ಮ ಓದಿನ ಪರಿಕರಗಳು, ಜ್ಞಾನ ಸಂವರ್ಧನೆಯ ಮೂಲಗಳು ಬದಲಾಗುತ್ತಿರುವ ಈ ಸಮಯಕ್ಕೆ ಪುಸ್ತಕ ಎನ್ನುವ ಭೌತಿಕ ವಸ್ತುವಿನ ಅವಸಾನ ಹತ್ತಿರದಲ್ಲಿದೆ ಎಂದು ಘೋಷಿಸಬಹುದೇ? ಈ ಪ್ರಶ್ನೆಯನ್ನು ಹಿಡಿದು 15 ಭಿನ್ನ ಸಂವಾದಗಳನ್ನು ಸಂಗ್ರಹಿಸಿರುವ ಪುಸ್ತಕ 'ದಿಸ್ ಇಸ್ ನಾಟ್ ದ ಎಂಡ್ ಆಫ್ ದ ಬುಕ್'.